ಆ) <u>ಚುಕ್ಕೆಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 26-07-2007ರಂದು 14ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 66 ಪ್ರಶ್ನೆಗಳ ಪೈಕಿ 62 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅನುಬಂಧ-1

7) ಗಮನ ಸೆಳೆಯುವ ಸೂಚನೆ

ಅ) ವಿಷಯ: ಅಕ್ರಮ ಸಕ್ರಮ ಜಮೀನು ಮಂಜೂರಾತಿ ಸಮಿತಿಯಿಂದ ತೊಂದರೆ ಆಗಿರುವ ಬಗ್ಗೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ): ಮಾನ್ಯ ಅಧ್ಯಕ್ಷರೆ, ಸರ್ಕಾರ ಅಕ್ರಮ ಸಕ್ರಮ ಸಮಿತಿ ಮಾಡಿದೆ. ಸಮಿತಿ ಮಾಡಿ ಅಲ್ಲಿ ನಮಗೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ. ಕಾರಣ ಇಷ್ಟೇ, ಸರ್ಕಾರ ಕಂದಾಯ ಕಾರ್ಯದರ್ಶಿಗಳು ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಆ circular ಪ್ರಕಾರ ಕೆಲಸ ಮಾಡುವುದಕ್ಕಾಗುವುದಿಲ್ಲ. ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 97(1) ರಂತೆ ಪ್ರತಿಯೊಂದು ಗ್ರಾಮದಲ್ಲಿ 100 ಜಾನುವಾರುಗಳಿಗೆ 12 ಎಕರೆ ಗೋಮಾಳ ಅದೆಲ್ಲಾ ಹಾಕಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದು ಆಗಿರತಕ್ಕಂಥಾದ್ದು 1966 ರಲ್ಲಿ. ಇದುವರೆಗೆ ಕೂಡ ಈ circular effect ಗೆ ಬಂದಿರಲಿಲ್ಲ ಈಗ circular effect ಗೆ ತಂದಿದ್ದಾರೆ. ಅದರ ಪ್ರಕಾರ ಅಕ್ರಮ ಸಕ್ರಮ ಸಮಿತಿಯವರು ಎಲ್ಲಿಯೂ ಕೆಲಸ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈಗ ಏಕೆ ಇದನ್ನು effect ಕೋಟ್ಟಿದ್ದೀರಿ? ಇದು ಮೊದಲು ಇರಲಿಲ್ಲವೇ? ಅಕ್ರಮ ಸಕ್ರಮಕ್ಕೆ ಸಂಬಂಧಪಟ್ಟಂತೆ ಹಿಂದೆ ಇದ್ದಂತಹ ಸಮಿತಿಗಳು ಮಂಜೂರಾತಿಯನ್ನು ಕೊಟ್ಟಿವೆ, ಅದಕ್ಕೆ ಎಲ್ಲಾ ರೈತರು ಹಣವನ್ನು ಕೂಡ ತುಂಬಿದ್ದಾರೆ. ಅದನ್ನು ಕೊಡುವುದಕ್ಕೂ ಕೂಡ ಇವತ್ತು ಅಧಿಕಾರಿಗಳು ತಡೆ ಒಡ್ಡುತ್ತಿದ್ದಾರೆ. ನಾನು ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಇದಕ್ಕೆ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬಾಲಕೃಷ್ಣರವರು ಏನು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ, ಅದಕ್ಕೆ ಈ ಹೇಳಿಕೆಯನ್ನು ತಮ್ಮ ಅಪ್ಪಣೆ ಪಡೆದು ಓದುತ್ತೇನೆ.

ರಿಟ್ ಅರ್ಜಿ ಸಂಖ್ಯೆ 14048/2005ರಲ್ಲಿ ಉಚ್ಚ ನ್ಯಾಯಾಲಯವು ಗೋಮಾಳ ಜಮೀನುಗಳ ಬಗ್ಗೆ ಆದೇಶವನ್ನು ನೀಡಿ ಸದರಿ ಆದೇಶವನ್ನು ಪಾಲಿಸುವಂತೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೂ ಹಾಗೂ ರಾಜ್ಯದಲ್ಲಿನ ಎಲ್ಲಾ ಜಿಲ್ಲಾಧಿಕಾರಿಗಳಿಗೂ ನಿರ್ದೇಶಿಸಿತ್ತು.

ಮೇಲೆ ತಿಳಿಸಿದ ನ್ಯಾಯಾಲಯದ ಆದೇಶದಂತೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಸುತ್ತೋಲೆಯನ್ನು ಹೊರಡಿಸಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ದಿನಾಂಕ : 24-12-2005ರಂದು ಎಲ್ಲಾ ಜಿಲ್ಲಾಧಿಕಾರಿಗಳಿಗೂ ತಿಳಿಸಿದ್ದರು. (ಸುತ್ತೋಲೆ ಪ್ರತಿ ಲಗತ್ತಿಸಿದೆ) ತದನಂತರ ಸದರಿ ಆದೇಶದ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ರಾಜ್ಯ ಸರ್ಕಾರವು ರಿಟ್ ಅಪೀಲ್ ಅರ್ಜಿಯನ್ನು ದಾಖಲಿಸಿತು. ಮಾನ್ಯ ಉಚ್ಚ ನ್ಯಾಯಾಲಯ ರಿಟ್ ಅಪೀಲನ್ನು ಮಂಜೂರು ಮಾಡಿ ಏಕ ಸದಸ್ಯ ಪೀಠ ನೀಡಿದ್ದ ತೀರ್ಪನ್ನು ರದ್ದುಪಡಿಸಿತು. ಸದರಿ ಆದೇಶವನ್ನು ಆದರಿಸಿ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ದಿನಾಂಕ : 5-1-2007ರಂದು ಮಾನ್ಯ ಸದಸ್ಯರು ಈಗ ಪ್ರಶ್ನಿಸಿರುವ ಸುತ್ತೋಲೆಯನ್ನು ಹೊರಡಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಗೋಮಾಳ ಜಮೀನುಗಳ ಕುರಿತು ಇವತ್ತಿನ ಬದಲಾದ ಸನ್ನಿವೇಶದಲ್ಲಿ ಒಕ್ಕಲುತನ, ಕೃಷಿಯ ವ್ಯವಸ್ಥೆಯಲ್ಲಿ ಈ ಹಿಂದೆ ಎಷ್ಟು ಗೋಮಾಳ ಭೂಮಿಯ ಅವಶ್ಯಕತೆ ಇತ್ತೋ, ಆ ಅವಶ್ಯಕತೆ ಇವತ್ತಿನ ಬದಲಾದ ವ್ಯವಸ್ಥೆಯಲ್ಲಿ ಬೇಕಾಗಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತಿಪಡಿಸಿದ್ದು ಮತ್ತು ಗೋಮಾಳ ಭೂಮಿಯ ಇವತ್ತಿನ ಅವಶ್ಯಕತೆ ಎಷ್ಟಿದೆ ಎಂಬುದನ್ನು ತಿಳಿದುಕೊಂಡು ಅಥವಾ ಸಮೀಕ್ಷೆ ಮಾಡಿ ಅನಧಿಕೃತ ಗೋಮಾಳ ಜಮೀನು ಸಾಗುವಳಿಯನ್ನು ಅಧಿಕೃತಗೊಳಿಸಲು ಕ್ರಮ ಕೈಗೊಳ್ಳಲು ಮಾನ್ಯ ನ್ಯಾಯಾಧೀಶರು ಅಭಿಪ್ರಾಯ ವ್ಯಕ್ತಪಡಿಸಿದ್ದು ತಿಳಿದು ಬರುತ್ತದೆ.

ಆದರೆ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಭೂ ಕಂದಾಯ ಕಾನೂನಿನ ನಿಯಮ 97(1)ರಡಿಯಲ್ಲಿ ನಿಗಧಿಪಡಿಸಿದ 100 ಜಾನುವಾರುಗಳಿಗೆ 12 ಎಕರೆ ಜಮೀನು ನಿಗಧಿಪಡಿಸಲು ಇರುವ ನಿಯಮದ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಹೀಗಾಗಿ ಜಿಲ್ಲಾಧಿಕಾರಿಗಳು, ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನ ನಿರ್ದೇಶನದ ರೀತಿ

ಗೋಮಾಳ ಜಮೀನುಗಳ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಯಾವ ಅಳತೆಗೋಲನ್ನು ಅಂದರೆ ಕಂದಾಯ ಕಾನೂನು ನಿಯಮ 97(1)ರಡಿ ನಿಗಧಿಪಡಿಸಿದ ಅಳತೆಗೋಲನ್ನು ಅವಗಾಹನಿಸಬೇಕೆ ? ಅಥವಾ ಬೇರೆ ಯಾವ ಅಳತೆಗೋಲನ್ನು ಅನುಸರಿಸಬೇಕೆ ಎಂಬ ಬಗ್ಗೆ ಸ್ಪಷ್ಟನೆ ಇರುವುದಿಲ್ಲ. ಹೀಗಾಗಿ ಈ ಹಿನ್ನೆಲೆಯಲ್ಲಿ ದಿನಾಂಕ : 5-1-2007ರಂದು ಹೊರಡಿಸಿದ ಸುತ್ತೋಲೆ ಕುರಿತು ಕೆಲವೊಂದು ಬದಲಾವಣೆಗಳ ಬಗ್ಗೆ ಸ್ಪಷ್ಟ ಅಭಿಪ್ರಾಯ ಪಡೆದುಕೊಳ್ಳಲು ಕಂದಾಯ ಇಲಾಖೆಯು ಕಡತವನ್ನು ಕಾನೂನು ಇಲಾಖೆಗೆ ಮಂಡಿಸಿದೆ.

ಕರ್ನಾಟಕ ಸರ್ಕಾರ

ಸುತ್ತೋಲೆ

ಸಂಖ್ಯೆ : ಕಂಇ/74/ಎಲ್‌ಜಿಪಿ/2005, ಬೆಂಗಳೂರು, ದಿನಾಂಕ : 24-12-2005.

Writ Petition No. 14048 of 2005 (KLR-RES) ದಲ್ಲಿ ದಿನಾಂಕ : 22-9-2005 ರಂದು ನೀಡಿದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನ ಒಂದು ಪ್ರತಿಯನ್ನು ಇದಕ್ಕೆ ಲಗತ್ತಿಸುತ್ತಾ ಸದರಿ ಆದೇಶದಲ್ಲಿ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ರಾಜ್ಯದಲ್ಲಿಯ ಯಾವುದೇ ಗೋಮಾಳ, ಗಾಯರಾಣ, ಹುಲ್ಲುಬಣಿ ಜಮೀನುಗಳನ್ನು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಮಂಜೂರು ಮಾಡಲು ಅವಕಾಶ ಇಲ್ಲ. ಅಂತಹ ಜಮೀನುಗಳನ್ನು ಗೋಮಾಳ, ಗಾಯರಾಣ, ಹುಲ್ಲುಬಣಿಯಾಗಿಯೇ ಮುಂದುವರೆಸಿಕೊಂಡು ಹೋಗತಕ್ಕದ್ದೆಂದು ಮತ್ತು ಅಂತಹ ಜಮೀನುಗಳಲ್ಲಿ ಅನಧಿಕೃತ ಸಾಗುವಳಿಯನ್ನು ಮುಂದುವರೆಸಕೂಡದೆಂದು ಹಾಗೂ ಆ ಜಮೀನುಗಳನ್ನು ಗ್ರಾಮೀಣ ಸಮುದಾಯದ ಸಾರ್ವಜನಿಕ ಉಪಯೋಗಕ್ಕೆ ಮೀಸಲಿರಿಸಲಾಗಿದೆಯೆಂದು ನ್ಯಾಯಾಲಯ ನಿರ್ದೇಶನವಿತ್ತಿದೆ. ಸದರಿ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಜಾರಿಯಲ್ಲಿ ತರಲು ಆದೇಶದ 25ನೇ ಕಂಡಿಕೆಯಲ್ಲಿ ಉಚ್ಚ ನ್ಯಾಯಾಲಯದ ನಿರ್ದೇಶನವಿದೆ. ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಪ್ರತಿಯೊಬ್ಬ ಜಿಲ್ಲಾಧಿಕಾರಿಯ ಕರ್ತವ್ಯವಾಗಿದೆ ಎಂದೂ ತಿಳಿಸಲಾಗಿದೆ. ಆದುದರಿಂದ, ಇನ್ನುಮುಂದೆ ಗೋಮಾಳ, ಗಾಯರಾಣ, ಹುಲ್ಲುಬಣಿ ಜಮೀನುಗಳಿಗೆ ಸಂಬಂಧಿಸಿದ ಯಾವುದೇ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸದಿರುವಂತೆ ಈ ಮೂಲಕ ತಿಳಿಸಲಾಗಿದೆ.

ಇದರ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಬಂದ ತಕ್ಷಣ ಮಾನ್ಯ ಬಾಲಕೃಷ್ಣರವರು ಏನು ವಿಷಯವನ್ನು ಎತ್ತಿದ್ದಾರೆ, ಅದು ಬಹಳ ಪ್ರಮುಖವಾದಂತಹ ವಿಷಯ. ಅದರ ಬಗ್ಗೆ ಆದಷ್ಟು ಬೇಗನೇ ಕಾನೂನು ಇಲಾಖೆಯೊಡನೆ ಸಮಾಲೋಚನೆ

ಮಾಡಿಕೊಂಡು ಇದರ ಬಗ್ಗೆ ಸ್ಪಷ್ಟೀಕರಣ ಮಾಡುವಂತಹ ಕೆಲಸವನ್ನು ನಾವು ಆದಷ್ಟು ಬೇಗನೇ ಮಾಡುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ.– ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ನಾನು ಕಳೆದ ಸದನದಲ್ಲಿ ಕೂಡ ಮಂಡಿಸಿದ್ದೇನು. ಆಗ ಕೂಡ ಇದೇ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆದುಕೊಂಡು ನೀವು ಮುಂದೆ ಮಂಜೂರು ಮಾಡುವಂಥಾದ್ದಕ್ಕೆ ತೀರ್ಮಾನವನ್ನು ತೆಗೆದುಕೊಳ್ಳಿ. ಆದರೆ ಹಿಂದೆ ಇದ್ದಂತಹ ಸಮಿತಿಗಳು ಮಂಜೂರು ಮಾಡಿ ಹಣ ಕಟ್ಟಿರುವಂತಹ ರೈತರಿಗೆ ಹಕ್ಕು ಪತ್ರವನ್ನು ಕೊಡುವುದಕ್ಕೆ ಏಕೆ ತಡ ಮಾಡಿದ್ದೀರಿ ? ಅವರಿಗೆ ಹಕ್ಕುಪತ್ರ ಕೊಡಿಸಿ. ಮುಂದೆ ಕೊಡುವುದಕ್ಕೆ ಬಿಡುವುದಕ್ಕೆ ತೀರ್ಮಾನ ಕೈಗೊಳ್ಳುವುದು ನಿಮಗೆ ಬಿಟ್ಟಿದ್ದು. ಆದರೆ ಹಿಂದೆ ಹಣ ಕಟ್ಟಿರುವಂತಹ ರೈತರಿಗೆ ನೀವು ಏಕೆ ತೊಂದರೆ ಕೊಡುತ್ತೀರಿ ? ಆದುದರಿಂದ ತಾವು ಸಾಗುವಳಿ ಚೀಟಿಯನ್ನು ಕೊಡುವುದರ ಬಗ್ಗೆ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು.

ಶ್ರೀ ಅರಗ ಜ್ಞಾನೇಂದ್ರ.– ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ ಸಂಗತಿಯಾಗಿರುವುದರಿಂದ ನಾನು ಮಧ್ಯ ಪ್ರವೇಶ ಮಾಡುವುದಕ್ಕೆ ಅನುಮತಿಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಮಲೆನಾಡಿನಲ್ಲಿ ಕೂಡ ಪ್ರತಿನಿತ್ಯ ಇದನ್ನು ಅನುಭವಿಸುತ್ತಿದ್ದೇವೆ. ಈಗ ಜಾನುವಾರುಗಳ ಸಂಖ್ಯೆ ಅಷ್ಟಿಲ್ಲ. 2001ನೇ ಇಸವಿಯ census ಅನ್ನು ನೋಡುತ್ತಾರೆ. ಅದರಲ್ಲಿ ಇರುವುದನ್ನು ಗಣನೆಗೆ ತೆಗೆದುಕೊಂಡು ಹಾಗೆ ಮಾಡಬೇಕು, ಹೀಗೆ ಮಾಡಬೇಕೆಂದು ಇದೆ. ಇಲ್ಲಿ ವಿಶೇಷವಾದಂತಹ confusion ಇದೆ. ಶಾಸಕರ ನೇತೃತ್ವದ ಬಗರ್ ಹುಕುಂ ಸಮಿತಿಗಳು ಇವತ್ತು ಕೆಲಸ ಮಾಡುವುದಕ್ಕಾಗುತ್ತಿಲ್ಲ. ನನ್ನ ತೀರ್ಥಹಳ್ಳಿ ತಾಲ್ಲೂಕು ಒಂದರಲ್ಲೇ ಸುಮಾರು 7,000 ಅರ್ಜಿಗಳು ಗೋಮಾಳಕ್ಕೆ ಸಂಬಂಧಪಟ್ಟ ಹಾಗೆ ಇವೆ. ಇನ್ನೂ ಕೂಡ ನಾನು ಅವುಗಳನ್ನು ಇತ್ಯರ್ಥ ಮಾಡುವುದಕ್ಕೆ ಆಗುತ್ತಿಲ್ಲ. ಹಾಗಾಗಿ ಇದನ್ನು relax ಮಾಡಬೇಕು. Actually ಆ ಗ್ರಾಮದಲ್ಲಿ ಎಷ್ಟು ಜಾನುವಾರುಗಳು ಇವೆ ಎಂದು ಗಣತಿಗೆ ತೆಗೆದುಕೊಳ್ಳಿ. ಈಗ ಜಾನುವಾರುಗಳನ್ನು ಬಿಟ್ಟು ಯಾರೂ ಮೇಯಿಸುತ್ತಿಲ್ಲ. ಅವುಗಳನ್ನು ಕಟ್ಟಿ ಸಾಕುತ್ತಾರೆ. ಆದರೆ ನಿಮ್ಮ ಬಯಲು ಸೀಮೆಯಾದ ಕೋಲಾರದಲ್ಲಿ ಇದೆಯೋ ಏನೋ ಗೊತ್ತಿಲ್ಲ. ಮೊದಲು ನಮ್ಮಲ್ಲಿ ಗುಡ್ಡಕ್ಕೆ ಬಿಟ್ಟು ಹೊಡೆಯುವುದು ಆಮೇಲೆ ತಂದು ಕೂಡು ಕೊಟ್ಟಿಗೆಯಲ್ಲಿ ಸಾಕುವುದು ಇತ್ತು. ಆದರೆ ಈಗ ಆ ರೀತಿ ಇಲ್ಲ. ಈಗ ಕೇವಲ ಎರಡು ಅಥವಾ ಮೂರು ಹೈಬ್ರಿಡ್ ತಳಿಯ ಜಾನುವಾರುಗಳನ್ನು ಅಚ್ಚುಕಟ್ಟಾಗಿ ಸಾಕುತ್ತಿದ್ದಾರೆ. ಈಗ ನಮಗೆ ಗೋಮಾಳದ ಅವಶ್ಯಕತೆ

ಮೊದಲಿನ ರೀತಿಯಲ್ಲಿ ಇಲ್ಲ. ಆದುದರಿಂದ ಹೊಸ ಬಗರ್ ಹುಕುಂ ಮಾಡುವುದಕ್ಕೆ ಅವಕಾಶವನ್ನು ಕೊಡಬೇಡಿ. ನಿಮ್ಮ Revenue ಅಧಿಕಾರಿಗಳು ಅದನ್ನು ಕಟ್ಟುನಿಟ್ಟಾಗಿ ತರಲಿ ಯಾರಾದರೂ ಒತ್ತುವರಿ ಮಾಡುವಾಗ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವುದು ಬೇಡ. ಆದರೆ ಯಾರು ದಲಿತರು, ಬಡವರು ಒತ್ತುವರಿ ಮಾಡಿದ್ದಾರೆ, ಅವರಿಗೆ ಈ ಕಾನೂನನ್ನು ಅನ್ವಯಿಸಿ ಅದರಿಂದ ಕಿರುಕುಳವಾಗಬಾರದು. ಆದುದರಿಂದ ತಾವು ಕುಳಿತು ಕಂದಾಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತಕ್ಷಣವೇ ಸುತ್ತೋಲೆಯನ್ನು ಕಳುಹಿಸಬೇಕು. ಇಲ್ಲದೆ ಇದ್ದರೆ ನಮಗೆ ಮಂಜೂರಾತಿಗೆ ಅವಕಾಶವೇ ಇಲ್ಲ. ಈಗಾಗಲೇ ಕೊಟ್ಟಿದ್ದಕ್ಕೂ ಕೂಡ ಮಾನ್ಯ ಸದಸ್ಯರು ಹೇಳಿದ ಹಾಗೆ ಹಣ ಕಟ್ಟಿಸಿಕೊಳ್ಳುತ್ತಿಲ್ಲ.

ಅಧ್ಯಕ್ಷರು.– ಕಾನೂನು ಇಲಾಖೆ ಜೊತೆ ಸಮಾಲೋಚನೆ ಮಾಡಿ ಶೀಘ್ರದಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇನ್ನು ಏನು ಹೇಳಬೇಕು ?

ಶ್ರೀ ಹೆಚ್.ಸಿ.ಬಾಲಕೃಷ್ಣ.– ಹಿಂದೆ ಹಣ ಕಟ್ಟಿರುವವರಿಗೆ ಏನು ಮಾಡುತ್ತಾರೆಂದು ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಜೀವರಾಜ್.– ಮಾನ್ಯ ಅಧ್ಯಕ್ಷರೆ, ಜಾನುವಾರು ಸಮೀಕ್ಷೆ ಹೊಸದಾಗಿ ನಡೆಯಬೇಕು. 2001 ಜಾನುವಾರು ಸಮೀಕ್ಷೆ ಪ್ರಕಾರವಾದರೆ ನನ್ನ ಮನೆಯಲ್ಲಿ ನೂರು ಜಾನುವಾರು ಇತ್ತು. ಆದರೆ ಇವತ್ತು ನನ್ನ ಮನೆಯಲ್ಲಿ ಮೂರು ಜಾನುವಾರು ಇರುವುದು. ಹಾಗಾಗಿ ನಮ್ಮಲ್ಲಿ 97 difference ಇವೆ.

ಶ್ರೀ ವಾಟಾಳ್ ನಾಗರಾಜ್.– ಮಾನ್ಯ ಅಧ್ಯಕ್ಷರೆ, ಯಾರು ವಿಷಯವನ್ನು ಎತ್ತಿದ್ದಾರೆ ಅವರು ಮಾತ್ರ ಕೇಳಬೇಕು. ಇದು ಏನು ?

ಶ್ರೀ ಅರಗ ಜ್ಞಾನೇಂದ್ರ.– ನೀವು ಇದಕ್ಕೆ ಮಾತ್ರ ನಿಯಂತ್ರಣ ಎಂದರೆ ನಿಮಗೆ ಅನ್ವಯಿಸದೇ ಇರುವಂತಹ.....

ಶ್ರೀ ವಾಟಾಳ್ ನಾಗರಾಜ್.– ನೀವು ಕೇಳಬೇಡಿ ಎಂದು ಹೇಳುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ.– ಆ ನಿಬಂಧನೆಗಳು ನಿಮಗೂ ಅನ್ವಯಿಸುತ್ತವೆ.

ಅಧ್ಯಕ್ಷರು.– ಎಲ್ಲರೂ ಎದ್ದು ನಿಂತುಕೊಳ್ಳುತ್ತಾರೆ, ಎಲ್ಲರೂ ಮಾತನಾಡುತ್ತಾರೆ, ಏನು ಮಾಡುವುದು ? ಎಷ್ಟು ಸಾರಿ ಹೇಳಿದರೂ ಕೇಳುವುದಿಲ್ಲ.

ಶ್ರೀ ಎನ್. ಧರ್ಮಸಿಂಗ್.– Call attention ಅರ್ಥ ಏನು ?

ಶ್ರೀ ವಾಟಾಳ್ ನಾಗರಾಜ್.– ಗಮನ ಸೆಳೆಯುವ ಸೂಚನೆ ಬಗ್ಗೆ ತಾವು ಹೇಳಬೇಕು.

ಶ್ರೀ ಅರಗ ಜ್ಞಾನೇಂದ್ರ.– ವಾಟಾಳ್ ನಾಗರಾಜ್ ಎಲ್ಲರಿಗೂ ಪದ್ಧತಿ ಹೇಳುತ್ತಾರೆ, ಅವರು ಮೊದಲು ಈ ಪದ್ಧತಿ ಅನುಸರಿಸಲಿ, ಎಲ್ಲದಕ್ಕೂ ಎದ್ದು ನಿಲ್ಲುತ್ತಾರೆ. ಈಗ ನಾವು ಎದ್ದು ಕೂಡಲೆ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್.– ನಾನು ಎಲ್ಲಾ ವಿಷಯಕ್ಕೂ ಎದ್ದು ನಿಂತಿಲ್ಲ.

ಅಧ್ಯಕ್ಷರು.– ಗಮನ ಸೆಳೆಯುವ ಸೂಚನೆ ಯಾರು ಪ್ರಸ್ತಾಪ ಮಾಡಿರುತ್ತಾರೆ, ಮಾನ್ಯ ಸಚಿವರು ಉತ್ತರ ನೀಡಿದ ಮೇಲೆ ಅವರೇ clarification ಕೇಳಬೇಕೇ ಹೊರತು ಬೇರೆಯವರು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ.– ನೀವು ಮಾತನಾಡಬೇಡಿ ಎಂದು ಹೇಳಿದಾಗ ವಾಟಾಳ್ ನಾಗರಾಜ್‌ರವರು ಅಲ್ಲಿ ಬಂದು ಮಲಗಿಕೊಳ್ಳುತ್ತಾರೆ. ನಮಗೆ ಮಾತ್ರ ಪಾಠ ಹೇಳುತ್ತಾರೆ.

ಶ್ರೀ ಎನ್. ಧರ್ಮಸಿಂಗ್.– ಪ್ರಶ್ನೆ ಕೇಳಿದಾಗ ಉತ್ತರ ಕೊಡಲಿಲ್ಲವೆಂದರೆ ಅಲ್ಲಿಗೆ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್.– ಗಮನ ಸೆಳೆಯುವ ಸೂಚನೆಯಲ್ಲಿ ಯಾರು ನೋಟೀಸ್ ಕೊಟ್ಟಿರುತ್ತಾರೆ ಅವರು ಕೇಳಬೇಕು.

(ಗೊಂದಲ)

ಅಧ್ಯಕ್ಷರು.– ಈಗ ಸಚಿವರು ಉತ್ತರ ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್.– ಮಾನ್ಯ ಬಾಲಕೃಷ್ಣರವರು ಈ ಒಂದು ಸುತ್ತೋಲೆ ಬಗ್ಗೆ ಗಮನ ಸೆಳೆಯುವ ಸೂಚನೆ ಏನು ಕೊಟ್ಟಿದ್ದಾರೆ, ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಕಾನೂನು ಇಲಾಖೆಯಿಂದ ಅಭಿಪ್ರಾಯವನ್ನು ಪಡೆದುಕೊಂಡ ತಕ್ಷಣವೇ ಸ್ಪಷ್ಟೀಕರಣವನ್ನು ಮಾಡುತ್ತೇವೆ. ಅವರು ಇನ್ನೊಂದು ಪ್ರಮುಖವಾದಂತಹ ವಿಚಾರವನ್ನು ಹೇಳಿದ್ದಾರೆ, ಈಗಾಗಲೇ ಮಂಜೂರಾಗಿರುವುದಕ್ಕೆ fees ತೆಗೆದುಕೊಂಡು ಅದನ್ನು regularize ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಸ್ಪಷ್ಟವಾದಂತಹ ಸೂಚನೆಯನ್ನು ಕೊಟ್ಟು, ಈಗಾಗಲೇ ಹಿಂದೆ ಮಂಜೂರಾಗಿ recommend ಮಾಡಿರುವುದು ಇವೆ, ಅದಕ್ಕೆ ಆದಷ್ಟು ಬೇಗನೇ fees ತೆಗೆದುಕೊಂಡು regularise ಮಾಡುವುದಕ್ಕೆ ಸೂಚನೆಯನ್ನು ಕೊಡುತ್ತೇನೆ.

ಅಧ್ಯಕ್ಷರು.– ಶ್ರೀ ಎಂ.ಟಿ.ಬಿ. ನಾಗರಾಜುರವರೆ ಕೇಳಿ.

ಶ್ರೀ ಜಿ.ಎಸ್.ಗಡ್ಡದೇವರ ಮಠ.– ನಾನು ನಿನ್ನೆಯಿಂದ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಅಧ್ಯಕ್ಷರು.– ನಾಗರಾಜುರವರೆ, ಕೈಗಾರಿಕಾ ಸಚಿವರು ಆವರ ಕ್ಷೇತ್ರದಲ್ಲಿ meeting

ಇದೆ ಎಂದು permission ತೆಗೆದುಕೊಂಡು ಹೋಗಿದ್ದಾರೆ. ನಿಮಗೆ ನಾಳೆ ಅವಕಾಶ ಕೊಡುತ್ತೇನೆ.

ಆ) ವಿಷಯ : ಕೆ.ಹೆಚ್.ಡಿಸಿ.ಯಲ್ಲಿ ಕೆಲಸ ಮಾಡುವ ಕೈಮಗ್ಗ ನೇಕಾರರ ಗೃಹ ಸಾಲ ಮತ್ತು ಉದ್ಯೋಗ ಸಾಲ ಮನ್ನಾ ಮಾಡುವ ಬಗ್ಗೆ.

ಶ್ರೀ ಸಿದ್ದು ಸವದಿ (ಜಮಖಂಡಿ).– ಮಾನ್ಯ ಅಧ್ಯಕ್ಷರೆ, ನಮ್ಮ ಸಮ್ಮಿಶ್ರ ಸರ್ಕಾರ ಮೀನುಗಾರರಿಗೆ ಕೊಟ್ಟಿರುವಂತೆ ನೇಕಾರರಿಗೂ ಸಹ ಸಾಕಷ್ಟು ಸೌಲಭ್ಯಗಳನ್ನು ಸಹ ಈ ರಾಜ್ಯದಲ್ಲಿ ಕೊಟ್ಟಿದೆ. ನಾನು ಬಹಳ ನೋವಿನಿಂದ ಒಂದು ವಿಷಯವನ್ನು ಹೇಳಬಯಸುತ್ತೇನೆ. ಒಟ್ಟಾರೆ ರಾಜ್ಯದಲ್ಲಿ ಅತ್ಯಂತ ಹೀನಾಯ ಸ್ಥಿತಿಯಲ್ಲಿ ಕಡು ಬಡತನದಲ್ಲಿ ಬದುಕುವವರು ಎಂದರೆ KHDC ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ಕೈಮಗ್ಗ ನೇಕಾರರು. ಸರ್ಕಾರದ ಯಾವುದೇ ಸೌಲಭ್ಯವಿರಲಿ, ಯಾವುದೇ ಸಹಾಯ ಇರಲಿ, ಸಮಾಜದ ಕಟ್ಟ ಕಡೆಯ ವ್ಯಕ್ತಿಗಳಿಗೆ ಮುಟ್ಟಬೇಕು ಎನ್ನುವ ನಿಯಮ ಇದೆ. ಆದರೆ ದುರ್ದೈವದ ಸಂಗತಿ ಎಂದರೆ KHDCಯಲ್ಲಿ ದಿನಗೂಲಿಯಲ್ಲಿ ಕೆಲಸ ಮಾಡುತ್ತಿರುವಂತಹ conversion cost ಮಾತ್ರ ಕೊಡುತ್ತಿದ್ದಾರೆ. ಆ conversion cost ತೆಗೆದುಕೊಳ್ಳಲು ಸಹ KHDCಯಲ್ಲಿ ಇಡೀ ಕುಟುಂಬ ಕೆಲಸ ಮಾಡುತ್ತಿದೆ. ಅಲ್ಲಿ ಹೆಣ್ಣು ಮಗಳು ಕೆಲಸ ಮಾಡುತ್ತಿದ್ದರೆ, ಆಕೆಯ ಪತಿ, ಆಕೆಯ ಅತ್ತೆ, ಮಾವ, ಮಕ್ಕಳು ಸಹಿತ ಸೇರಿ ಒಂದು ದಿವಸಕ್ಕೆ 60 ರಿಂದ 70 ರೂಪಾಯಿಯವರೆಗೆ conversion cost ಕಟ್ಟುತ್ತಿದ್ದಾರೆ. ಅವರಿಗೆ ಯಾವುದೇ ಸ್ವಂತ ಮನೆ ಇಲ್ಲ, ಸ್ವಂತವಾದ ಆಸ್ತಿ ಇಲ್ಲ, ಅಕಸ್ಮಾತ್ ಸರ್ಕಾರ ಅವರಿಗೆ ಕಚ್ಚಾಮಾಲನ್ನು ಪೂರೈಕೆ ಮಾಡದೇ ಹೋದರೆ ಅವರು ಉಪವಾಸ ಬೀಳುವಂತಹ ಸ್ಥಿತಿ ಈ ರಾಜ್ಯದಲ್ಲಿರುವ KHDC ಯಲ್ಲಿರುವ ಕೈಮಗ್ಗ ನೇಕಾರರಿಗೆ ಬಂದಿದೆ. ಸರ್ಕಾರ ನೇಕಾರರಿಗೆ ಸಾಲ ಮನ್ನಾ ಮಾಡಿದೆ, ಧೀರ್ಘಾವಧಿ ಬಡ್ಡಿಯನ್ನು ಮನ್ನಾ ಮಾಡಿದೆ, ವಿದ್ಯುತ್ ಸಬ್ಸಿಡಿಯನ್ನು ಕೊಡುತ್ತಿದೆ. ಈ ಸೌಲಭ್ಯದಲ್ಲಿ ಒಂದು ನಯಾ ಪೈಸೆ ಸಹಿತ ಕೆ.ಹೆಚ್.ಡಿ.ಸಿ.ಯಲ್ಲಿ ಕೆಲಸ ಮಾಡುವ ಕೈಮಗ್ಗ ನೇಕಾರರಿಗೆ ದೊರೆಯುತ್ತಿಲ್ಲ.

ಅಧ್ಯಕ್ಷರು.– ಆಯಿತು, ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಸಿದ್ದು ಸವದಿ.– ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರಥಮ ಬಾರಿಗೆ ಆ ಕೆ.ಹೆಚ್.ಡಿ.ಸಿ. ಸಂಸ್ಥೆಗೆ ನಮ್ಮ ಸರ್ಕಾರ 15 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಅದಕ್ಕೆ ನಾನು ಈ ಸದನದ ಮುಖಾಂತರ ಸರ್ಕಾರಕ್ಕೆ ಅಭಿನಂದನೆಯನ್ನು ಹೇಳುತ್ತೇನೆ.